ಉತ್ತರ

ಅ) ಇದೆ

ಮೇಲಿನ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ

ಆ) ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸುಗಳು ಪರಿಶೀಲನೆಯಲ್ಲಿವೆ

ಮುಖ್ಯಮಂತ್ರಿ ಮತ್ತು ಮುಖ್ಯ ಕಾರ್ಯದರ್ಶಿಗಳ ಕಛೇರಿ ಕಂಪ್ಯೂಟರೀಕರಣ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 16(503)

ಸದಸ್ಯರ ಹೆಸರು ಶ್ರೀ ಸಭಾಪತಿ ಯು ಆರ್ (ಉಡುಪಿ)

ಉತ್ತರಿಸುವ ಸಚಿವರು ಎಸ್ ಎಂ ಕೃಷ್ಣ(ಮುಖ್ಯ ಮಂತ್ರಿಗಳು)

ಪ್ರಶ್ನೆ

ಅ ಆಡಳಿತದಲ್ಲಿ ಮಾಹಿತಿ ತಂತ್ರಜ್ಞಾನ ಅಳವಡಿಕೆ ರಾಜ್ಯ ಸರ್ಕಾರದ ಧೋರಣೆ ಆಗಿದ್ದು ವಿಧಾನ ಸೌಧದಲ್ಲಿರುವ ಮುಖ್ಯ ಮಂತ್ರಿಗಳ ಕಛೇರಿ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಕಛೇರಿಯನ್ನು ಸಂಪೂರ್ಣವಾಗಿ ಕಂಪ್ಯೂಟರೀಕರಣ ಗೊಳಿಸಲಾಗಿದೆಯೆ? (ವಿವರ ನೀಡುವುದು)

ಉತ್ತರ

ಅ ಮುಖ್ಯ ಮಂತ್ರಿಯವರ ಸಚಿವಾಲಯವನ್ನು ಪೂರ್ಣವಾಗಿ ಕಂಪ್ಯೂಟರೀಕರಣಗೊಳಿಸಲಾಗಿದೆ ಮತ್ತು ಮುಖ್ಯ ಮಂತ್ರಿಯವರ ವಿಳಾಸಕ್ಕೆ ಬರುವ ಎಲ್ಲಾ ಪತ್ರಗಳನ್ನು ಕಂಪ್ಯೂಟರೀಕರಣಗೊಳಿಸುವ ವ್ಯವಸ್ಥೆಯನ್ನು ಅಳವಡಿಸಲಾಗಿದೆ ಇದನ್ನು ಸಂಪೂರ್ಣವಾಗಿ ಲೋಕಲ್ ಏರಿಯಾ ನೆಟ್ ವರ್ಕ್ಸ್ ಸ್ಥಾಪಿಸುವುದರ ಮೂಲಕ ಸಾಧಿಸಲಾಗಿದೆ ಇದಲ್ಲದೆ, ಮುಖ್ಯ ಮಂತ್ರಿಯವರ ಪರಿಹಾರ ನಿಧಿಗೆ ಸಂಬಂಧಪಟ್ಟಂತೆ, ಪತ್ರ ವ್ಯವಹಾರಗಳನ್ನು ತವಾನಣೆಗೆ ಒಳಪಟ್ಟು ಚೆಕ್‌ಗಳನ್ನು ವಿತರಿಸಲು ಕಂಪ್ಯೂಟರೀಕರಣ ಗೊಳಿಸಲಾಗಿದೆ

ಕೆಲವು ಮಾನಿಟರಿಂಗ್ ಸಿಸ್ಟಂಗಳಲ್ಲಿ ಆಯವ್ಯಯ ಭಾಷಣದ ಮೇಲೆ, ಭಾರತ ಸರ್ಕಾರದಲ್ಲಿ ಬಾಕಿ ಇರುವ ಪ್ರಸ್ತಾವನೆಗಳು, ಜಿಲ್ಲೆಗಳಲ್ಲಿ ತೆಗೆದುಕೊಳ್ಳುವ ಕ್ರಮಗಳು

ಮತ್ತು ಇಲಾಖೆಗಳಲ್ಲಿನ ಪ್ರಗತಿಯನ್ನು ಪುನರ್ ಪರಿಶೀಲಿಸುವ ವ್ಯವಸ್ಥೆಯನ್ನು ಮುಖ್ಯ ಮಂತ್ರಿಯವರ ಸಚಿವಾಲಯದಲ್ಲಿ ಕಂಪ್ಯೂಟರೀಕರಣ ಕರಣಗೊಳಿಸಲಾಗಿದೆ ' ಮುಖ್ಯ ಕಾರ್ಯದರ್ಶಿಯವರ ಕಛೇರಿಯ ಗಣಕೀಕರಣ ಪ್ರಗತಿಯಲ್ಲಿದೆ

ರಾಜ್ಯದಲ್ಲಿ ಸ್ವಾತಂತ್ರ ಯೋಧರ ಪಿಂಚಣಿ ಮಂಜೂರಾತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 17(506)

ಸದಸ್ಯರ ಹೆಸರು ಶ್ರೀ ಅಂಗಾರ ಎಸ್ (ಸೂಳ್ಯ)

ಉತ್ತರಿಸುವ ಸಚಿವರು ಶ್ರೀ ಎಸ್ ಎಂ ಕೃಷ್ಣ (ಮುಖ್ಯಮಂತ್ರಿಗಳು)

ಪ್ರಶ್ನೆ

ಅ) ರಾಜ್ಯದಲ್ಲಿ ಸ್ವಾತಂತ್ರ ಯೋಧರ ಪಿಂಚಣಿ ಮಂಜೂರಾತಿಗಾಗಿ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು? ಜಿಲ್ಲಾವಾರು ಮಾಹಿತಿ ನೀಡುವುದು

ಆ) ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕಾಗಿರುವ ಬಾಕಿ ಪ್ರಕರಣಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಇ) ಈ ಪ್ರಕರಣವನ್ನು ವಿಲೇವಾರಿ ಮಾಡಲು ಸರ್ಕಾರಕ್ಕೆ ಬೇಕಾಗುವ ಕಾಲಾವಕಾಶವೆಷ್ಟು?

ಈ) ವಿಲೇವಾರಿ ಮಾಡಲು ಸರ್ಕಾರದ ಮಟ್ಟದಲ್ಲಿ ವಿಪರೀತ ವಿಳಂಬವಾಗುತ್ತಿರುವ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳಾವುವು?

ಉತ್ತರ

ಅ) 307 (ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ)

ಆ) 192 (ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ)

ಇ) ಸಂಬಂಧಿಸಿದ ಜಿಲ್ಲಾಧಿಕಾರಿಗಳನ್ನು ಜೈಲು ಅಧಿಕಾರಿಗಳನ್ನು ಹಾಗೂ ಸ್ವಾತಂತ್ರ ಯೋಧರನ್ನು ಕೂಡ ನೇರವಾಗಿ ಸಂಪರ್ಕಿಸಿ ಮಾಹಿತಿಯನ್ನು ನೀಡುವಂತೆ ಕೋರಲಾಗಿದೆ ಅವರುಗಳಿಂದ ಮಾಹಿತಿ ಬಂದ ನಂತರ ವಿಳಂಬ ಮಾಡದೆ ವಿಲೇವಾರಿ